ಇಂದು ದಿಃ**13-03-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಎಸ್ ವಕೀಲರಿಂದ ವಾದಿಯರ ಪರಃ**

ನನಗೆ ಈದಾವೆಯಲ್ಲಿ ಸಾಕ್ಷಿ ಹೇಳಲು ಸಮನ್ಸ್ ಬಂದಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ ಮತ್ತು ಚಾಲಕ ಎಂದು ಕೆಲಸ ಮಾಡುತ್ತೇನೆ. ನನ್ನ ಹೆಸರಿನಲ್ಲಿ ಜಮೀನು ಇಲ್ಲ. ನನಗೆ ಈ ದಾವೆಯಲ್ಲಿ ಸಾಕ್ಷಿ ಹೇಳಲು ಯಾರೂ ಹೇಳಿರುವುದಿಲ್ಲ, ಆದರೆ ನನಗೆ ಗೊತ್ತಿರುವ ವಿಷಯ ಹೇಳಲು ಬಂದಿರುತ್ತೇನೆ. 3 ನೇ ಪ್ರತಿವಾದಿ ನನಗೆ ಸಾಕ್ಷಿ ಹೇಳಲು ಕರೆದಿಲ್ಲ. 3 ನೇ ಪ್ರತಿವಾದಿ ನನಗೆ ಈ ರೀತಿ ದಾವೆ ಆಗಿದೆ ಎಂದು ಹೇಳಿದ್ದನು. ವಾದಿಯರು ಈ ದಾವೆಯಲ್ಲಿ ಏನೇನು ದಾಖಲೆ ಹಾಜರುಪಡಿಸಿದ್ದಾರೆ ಎಂದು ಮಾಹಿತಿ ಇಲ್ಲ, ಸಾಕ್ಷಿ ಆದರೆ 3 ನೇ ಪ್ರತಿವಾದಿಯ ಸ್ವಂತ ಆಸ್ತಿಗಳ ಬಗ್ಗೆ ಹಾಕಿರುತ್ತಾರೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ತನ್ನ ತಕರಾರಿನಲ್ಲಿ ಏನು ತಿಳಿಸಿದ್ದಾನೆ ಎಂದು ಗೊತ್ತಿಲ್ಲ. 1 ನೇ ವಾದಿ ನನ್ನ ತಾಯಿಯ ಸಹೋದರ. 8 ನೇ ಪ್ರತಿವಾದಿ ನನ್ನ ತಾಯಿ. 3 ನೇ ಪ್ರತಿವಾದಿ ನನ್ನ ತಾಯಿಯ ತಮ್ಮ. ವಾದಿಯರು ಈ ದಾವೆಯಲ್ಲಿ ಪಿತ್ರಾರ್ಜಿತ ಆಸ್ತಿ ಮತ್ತು 3 ನೇ ಪ್ರತಿವಾದಿಯ ಸ್ವಂತ ಗಳಿಸಿದ ಆಸ್ತಿಗಳನ್ನು ತೋರಿಸಿರುತ್ತಾರೆ. ನನಗೆ ಅವುಗಳ ಸರ್ವೆ ನಂಬರ್ ಗಳನ್ನು ಹೇಳಲು ಬರುವುದಿಲ್ಲ. ಅವುಗಳ ಚಕ್‌ಬಂದಿ ಹೇಳಲು ಬರುವುದಿಲ್ಲ. ನನ್ನ ತಾಯಿಯ ತಂದೆಗೆ ಮೂಲತಃ 2 ಎಕರೆ 18 ಗುಂಟೆ ಜಮೀನು ಇತ್ತು. ನನ್ನ ಅಜ್ಜ ಭರಮಪ್ಪ ಈಗ ಸುಮಾರು ಒಂದು ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. 8 ನೇ ಪ್ರತಿವಾದಿ ಮತ್ತು ನಾನು ಕೂಡಿ ಇದ್ದೇವೆ. ನನ್ನ ತಾಯಿ ಸಹ ಈ ದಾವೆಯಲ್ಲಿ ಪಕ್ಷಗಾರಳು ಎಂದರೆ ಸರಿ. 8 ನೇ ಪ್ರತಿವಾದಿ ಈ ದಾವೆಯಲ್ಲಿ ಯಾವುದೇ ತಕರಾರು ಸಲ್ಲಿಸಿಲ್ಲ. ನನ್ನ ಜನ್ಮ ದಿನಾಂಕಃ08-09-1982 ಇರುತ್ತದೆ.

1999 ರಲ್ಲಿ ಆದ ಪಾಲುವಿಭಾಗದ ಬಗ್ಗೆ ನನಗೆ ಮಾಹಿತಿ ಇದೆ. ಆ ಸಮಯದಲ್ಲಿ ನನಗೆ 16 ವರ್ಷ ವಯಸ್ಸು ಎಂದರೆ ಸರಿ. ಪಾಲುವಿಭಾಗ ಪತ್ರ ನೊಂದಣಿ ಆಗಿಲ್ಲ. ಶೆಡ್ಯೂಲ್ ಬಿ 2 ನೇ ಆಸ್ತಿಯನ್ನು 3 ನೇ ಪ್ರತಿವಾದಿ ಖರೀದಿ ಮಾಡುವ ಸಮಯದಲ್ಲಿ ನಾನು ಇದ್ದೇನು. ಖರೀದಿ ಪತ್ರ ನಾನು ಸಹಿ ಮಾಡಿಲ್ಲ. ಶೆಡ್ಯೂಲ್ ಎ, ಐಟಂ ನಂಬರ್ 4 ಆಸ್ತಿ ಖರೀದಿಯ ಸಮಯದಲ್ಲಿ ನಾನು ಇರಲಿಲ್ಲ. ಶೆಡ್ಯೂಲ್ ಬಿಯ, ಐಟಂ ನಂಬರ್ 2 ಮತ್ತು 3 ಆಸ್ತಿಗಳನ್ನು ಯಾವ ರೀತಿ ಖರೀದಿ ಮಾಡಿದರು ಎಂದು ಗೊತ್ತಾ ಎಂದರೆ ಸಾಕ್ಷಿ, 7 ನೇ ಪ್ರತಿವಾದಿ ತಾಯಿ ಆಸ್ತಿ ಖರೀದಿ ಮಾಡಲು ಹಣಕೊಟ್ಟಿರುತ್ತಾರೆ. 7 ನೇ ಪ್ರತಿವಾದಿ ತಂದೆ ಅಪಘಾತದಲ್ಲಿ ತೀರಿಕೊಂಡಿದ್ದು, 7 ನೇ ಪ್ರತಿವಾದಿ ಒಬ್ಬಳೇ ಮಗಳು ಇದ್ದ ಕಾರಣ, ಪರಿಹಾರ ಬಂದಿದ್ದು ಆ ಹಣದಲ್ಲಿ ಮತ್ತು 3 ನೇ ಪ್ರತಿವಾದಿಯ ಸಹಾಯದಿಂದ ಐಟಂ ನಂಬರ್ 3 ಶೆಡ್ಯೂಲ್ ಬಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಈ ವಿಷಯವನ್ನು ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ತಿಳಿಸಿಲ್ಲ. ದಿನಾಂಕಃ11-08-1999 ರಂದು ಪಾಲುವಿಭಾಗ ಆದ ಬಗ್ಗೆ ನಾನು ದಾಖಲೆ ನೋಡಿಲ್ಲ. ಭರಮಪ್ಪ ಪಾಲುವಿಭಾಗ ಮಾಡಿದ್ದು, ಸಾಕ್ಷಿದಾರರು ಯಾರು ಇದ್ದರು ಎಂದು ಗೊತ್ತಿಲ್ಲ. ರಾಜನಹಳ್ಳಿಯಲ್ಲಿ ಪಂಚಾಯಿತಿ ಆಗಿತ್ತು. ನಾನು 17 ವರ್ಷ ವಯಸ್ಸು ಆಗುವವರೆಗೆ ರಾಜನಹಳ್ಳಿಯಲ್ಲಿ ಇದ್ದೆನು. ನಂತರ ನಮ್ಮೂರಿಗೆ ಹೋದೆನು. ನಾನು ರಾಜನಹಳ್ಳಿಯಲ್ಲಿ ಶಾಲೆ ಕಲಿತ್ತಿದ್ದೇನೆ.

ಶೆಡ್ಯೂಲ್ ಬಿ, ಐಟಂ ನಂಬರ್ 2 ಮತ್ತು 3 ಆಸ್ತಿಗಳು 3 ನೇ ಪ್ರತಿವಾದಿಯ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳೆದ ಸಲ ನಾನು ನ್ಯಾಯಾಲಯಕ್ಕೆ ಬಂದಾಗ 3 ನೇ ಪ್ರತಿವಾದಿ ಸಹ ನ್ಯಾಯಾಲಯಕ್ಕೆ ಬಂದಿದ್ದನು ಎಂದರೆ ಸರಿ. ನಾನು ಮತ್ತು ಆತ ಕೂಡಿ ಬಂದಿದ್ದೇವು ಎಂದರೆ ಸರಿಯಲ್ಲ. 3 ನೇ

ಪ್ರತಿವಾದಿ ಈಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾನೆ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ, 3 ನೇ ಪ್ರತಿವಾದಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1999 ರಲ್ಲಿ ಪಾಲುವಿಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ಮತ್ತು 7 ನೇ ಪ್ರತಿವಾದಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.